# ಮುಕ್ಕಾ ನಿನ್ನೊಡನೆ ನೋಡೊ ಮುಕ್ಕಾ

**Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi

ರಾಗ: ಮಧ್ಯಮಾವತಿ ತಾಳ: ಛಾಪು

ಮುಕ್ಕಾ ನಿನ್ನೊಡನೆ ನೋಡೊ ಮುಕ್ಕಾ ॥ ಪ ॥

ಮುಕ್ಕಾ ನಿನ್ನೊಡನೆ ನೋಡೋ
ಸೊಕ್ಕಬೇಡವೆಲೊ ಮುಂದೆ
ಕಕ್ಕಸ ಪಡುವಿ ಕನ್ನಡಿ ಒಡೆದರೆ
ದಕ್ಕಿಸಿಕೊಂಬ್ಯಾ ಎಲ ಹುಚ್ಚು ಮೂಳ ॥ ಅಪ ॥

ಗುರುಹಿರಿಯರ ನಿಂದೆ ಮಾಡಿ
ತಾಯಿ ತಂದೆಗಳ ಚರಣ ಸೇವೆಗಳ ಹೋಗಾಡಿ
ಪರಿಪರಿ ನೀನು
ಬರಿದೆ ಆಲಸ್ಯವನ್ನೆ ಮಾಡಿ
ಎಲೊ ಎಲೊ ಖೋಡಿ
ಭರದಿಂದೆಳೆವರು ಕಾಲಮದೂತರು
ಕೊರಳ ಕೊಯ್ವರೊ ಎಲ ಹುಚ್ಚು ಮೂಳ ॥ 1 ॥

ನಿನ್ನ ದೇಹವ ನೋಡಿಕೊಂಬೆ
ನಿನಗೆ ನೀನೇ ಚೆನ್ನಾಗಿದ್ದೇನೆಂತೆಂಬೆ
ಭ್ರುಮಿಸಿ ಹುಚ್ಚು
ಕುನ್ನಿಯಂದದಿ ಹೊಗಳಿಕೊಂಬೆ
ಬಲು ಜಾಣನೆಂಬೆ
ಇನ್ನೇನು ಹೇಳಲಿ ಕಾಲಮದೂತರು
ಬೆನ್ನ ಕೊಯ್ದು ನರ ತೆಗೆದು ಎಳೆವರೊ ॥ 2 ॥

ಹೆಂಡಿರ ಕಂಡು ಹಲ್ಲ ಕಿರಿವೆ

ಹಾಕಿದ ಚೌರಿ ಗೊಂಡೆ ರಾಕಟಿ ನೋಡಿ ಬೆರೆವೆ
ಅಲ್ಲಲ್ಲಿ ಕಂಡ
ಕಂಡ ವಿಷಯಕ್ಕೆ ಮನವಿಡುವೆ
ನಿನಗೇನು ಪರಿವೆ
ಚಂಡೆಮದೂತರು ಕಂಡೆಳಕೊಂಡು
ಹಿಂಡಿ ಹಿಪ್ಪೆ ಮಾಡಿಸುವರೊ ನಿನ್ನನು || 3 ||

ಬಾಲೇರ ಸುತರ ನಂಬಿದೆಲ್ಲೊ
ಮೂಗುತಿ ಕೊಪ್ಪು ವಾಲೆ ಮಾಡಿಸಿ ಇಟ್ಟೆಯಲ್ಲೊ
ಸಂಪತ್ತು ಸಿರಿ
ಬಾಳಿಕೆ ವ್ಯರ್ಥವಾಯಿತಲ್ಲೊ
ಕಡೆಗೆ ಬಲ್ಲೊ
ಸೀಳುವೆನೆನುತಲಿ ಕಾಲೆಮದೂತರು
ನಾಲಿಗೆ ಕೊಯ್ವರೊ ಎಲೆ ಹುಚ್ಚು ಮೂಳ || 4 ||

ನಿನ್ನೊಳು ನೀ ತಿಳಿದು ನೋಡೊ
ಗುರುಗಳ ಚರಣವನ್ನೆ ಚೆನ್ನಾಗಿ ಧ್ಯಾನ ಮಾಡೊ
ದುರಿತ ಮದಗ-
ಳನ್ನೆ ತರಿತರಿದೀಡಾಡೊ
ಭಕ್ತರ ಕೂಡೊ
ಚೆನ್ನ ಚಿದಾನಂದ ಸ್ವಾಮಿ ಪುರಂದರ
ವಿಠಲನ್ನ ಪದಾಬ್ಜವ ನೆರೆನಂಬಿ ಬದುಕೊ || 5 ||

**Classification:** Mundige
**Ankita:** purandara vittala
**Location:** NA
**Category:** Jeevanoddhara, Mukti Marga
**Sub- Category:** murKha, ahankara, huchha, tande, tayi, yama, deha, patni, rokka, nalige, Dhyana, kaNNaDi, bimba, pratibimba, nayi, sampattu,
**Pravachana:** NA
**Explanation:** Unknown